1036 (1037) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ). ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಪ್ರಾಥಮಿಕ ಶಾಲಾ ಶಿಕ್ಷಣ ಹಂತದಲ್ಲಿ ರಂಗ ಕಲೆಗಳ ಶಿಕ್ಷಣವನ್ನು ಜಾರಿಗೊಳಿಸಬೇಕೆಂಬ ರಂಗಕರ್ಮಿಗಳ ಮನವಿಯ ಬಗ್ಗೆ ಸರ್ಕಾರದ ನಿಲುವೇನು,

ಆ) ಈ ವಿಚಾರದಲ್ಲಿ ಇಲಾಖೆಯು ಈವರೆವಿಗೆ ಯಾವ ಕ್ರಮ ವಹಿಸಿದೆ, ವಿವರ ನೀಡುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಈ ಬಗ್ಗೆ ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ

ಆ) ಪ್ರಾಥಮಿಕ ಶಾಲಾ ಶಿಕ್ಷಕರಿಗೆ ರಂಗಕಲೆಗಳ ಪರಿಚಯವಿರಬೇಕು ಅವುಗಳನ್ನು ತಮ್ಮ ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಧ್ವನಿ, ಏರಿಳಿತ, ಸೂತ್ರದಬೊಂಬೆ, ಕಥಾಪೆಟ್ಟಿಗೆ ಪಾರವನ್ನು ದೃಶ್ಯರೂಪಕ್ಕೆ ಅಳವಡಿಸುವುದು ಮುಂತಾದ ವಿಷಯಗಳ ಬಗ್ಗೆ 2001–02ನೇ ಸಾಲಿನಿಂದಲೇ ಶಿಕ್ಷಣದಲ್ಲಿ ರಂಗಕಲೆ ಎಂಬ ತರಬೇತಿಯನ್ನು ಇಲಾಖೆ ಶಿಕ್ಷಕರಿಗೆ ಒದಗಿಸುತ್ತಿದೆ ಈಗಾಗಲೇ 1 50 ಲಕ್ಷ ಶಿಕ್ಷಕರು ಈ ತರಬೇತಿ ಪಡೆದಿದ್ದಾರೆ

1037 (1038) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ). ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯಾದ್ಯಂತ ಇರುವ ಸರ್ಕಾರಿ ಹಾಗೂ ಖಾಸಗಿ ಕಾನೂನು ಕಾಲೇಜುಗಳ ವಿವರ ನೀಡುವುದು,

ಆ) ಮೈಸೂರು ನಗರದಲ್ಲಿ ಸರ್ಕಾರಿ ಕಾನೂನು ಕಾಲೇಜು ಪ್ರಾರಂಭಿಸಬೇಕೆಂಬ ಮನವಿಯ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು)?